ಹಜಾರೆ ಫೌಂಡೇಶನ್‌ದ

# ಪದ್ಮಾವತಿ ಅಂತರಾಷ್ಟ್ರೀಯ ಶಾಲೆ ಹೊಸೂರ-ರಬಕವಿ

## ಪ್ರಥಮ ನಿಯತಕಾಲಿಕ ಪರೀಕ್ಷೆ, ಅಕ್ಟೋಬರ್-೨೦೨೦

## ಕನ್ನಡ(೧೦)

**ದಿನಾಂಕ: ೨೪/೧೦/೨೦೨೦ ಅಂಕಗಳು:೮೦ ಸಮಯ: ೩ಗಂಟೆ**

***ಸೂಚನೆಗಳು**

*ಪ್ರಶ್ನೆ ಪತ್ರಿಕೆಯಲ್ಲಿ ಎ ಮತ್ತು ಬಿ ಎಂದು ಒಟ್ಟು ಎರಡು ಭಾಗಗಳಿರುತ್ತವೆ.

*ಒಟ್ಟು ೧೭ ಮುಖ್ಯ ಪ್ರಶ್ನೆಗಳಿರುತ್ತವೆ.

*ಪ್ರತಿಯೊಂದು ಪ್ರಶ್ನೆಗಳ ಸೂಚನೆಗಳನ್ನು ಸರಿಯಾಗಿ ಓದಿಕೊಂಡು ಉತ್ತರಿಸಿ.

*ಮುಖ್ಯ ಪ್ರಶ್ನೆ ಹಾಗೂ ಉಪಪ್ರಶ್ನೆ ತಪ್ಪಿಲ್ಲದೆ ಬರೆಯಿರಿ.

## ವಿಭಾಗ-ಎ (೪೦ ಅಂಕಗಳು)

### (ವಾಚನ ಮತ್ತು ಗ್ರಹಿಕಾ ಕೌಶಲ್ಯ =೧೦ ಅಂಕಗಳು)

**ಪ್ರಶ್ನೆ ೧. ಗದ್ಯಭಾಗವನ್ನು ಗಮನವಿಟ್ಟು ಓದಿಕೊಂಡು, ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** ೫

ಒಂದು ಕಾಡಿನಲ್ಲಿ ಒಂದು ಸಾರಂಗವಿತ್ತು. ಬೇಡರ ಬಾಣ ತಗುಲಿ ಅದರ ಒಂದು ಕಣ್ಣು ಕುರುಡಾಗಿತ್ತು. ಒಂದೇ ಕಣ್ಣು ಆದ ಮೇಲೆ ಅದಕ್ಕೆ ಜೀವನ ನಡೆಸುವುದು ಬಹಳ ಕಷ್ಟವಾಯಿತು. ಏಕೆಂದರೆ, ಕುರುಡು ಕಣ್ಣಿನ ದಿಕ್ಕಿನಿಂದ ಶತೃಗಳು ಯಾರಾದರೂ ಬಂದರೆ ಅದಕ್ಕೆ ಗೊತ್ತೇ ಆಗುತ್ತಿರಲಿಲ್ಲ. ಆದ್ದರಿಂದ ಅದು ಬಹಳ ಯೋಚನೆ ಮಾಡಿ ಒಂದು ಉಪಾಯವನ್ನು ಕಂಡುಕೊಂಡಿತು. ಸಾರಂಗ ವಾಸಿಸುತ್ತಿದ್ದ ಕಾಡಿನಿಂದ ಸ್ವಲ್ಪದೂರದಲ್ಲಿ ಸಮುದ್ರದ ತೀರವಿತ್ತು. ನೀರಿನ ಅಂಚಿನಲ್ಲೊಂದು ಕಡೆ ತೀರವು ಕಡಿದಾಗಿ ಎತ್ತರವಾಗಿತ್ತು. ಈ ಸ್ಥಳದಲ್ಲಿ ಮೇಯಲು ಬೇಕಾದಷ್ಟು ಹುಲ್ಲು, ಸೊಪ್ಪು ಎಲ್ಲಾ ಇತ್ತು. ಸಾರಂಗವು ಇಲ್ಲಿಗೆ ಬಂದು, ಯಾವಾಗಲೂ ಸಮುದ್ರದ ಕಡೆಗೆ ಕುರುಡು ಕಣ್ಣಿರುವಂತೆ ನಿಂತು ಮೇಯತೊಡಗಿತು. ಸಮುದ್ರದ ಕಡೆಯಿಂದ ಯಾರೂ ಬರುವ ಹಾಗಿರಲಿಲ್ಲ. ಆದ್ದರಿಂದ ಆ ದಿಕ್ಕು ಸಾರಂಗಕ್ಕೆ ಸುರಕ್ಷಿತವಾಗಿತ್ತು. ನೆಲದ ಕಡೆಯಿಂದ ಯಾವ ಶತೃ ಬಂದರೂ ಸಾರಂಗದ ಸರಿಯಾಗಿದ್ದ ಕಣ್ಣಿಗೆ ಕೂಡಲೇ ಕಾಣಿಸಿಬಿಡುತ್ತಿತ್ತು. ಆಗ ಅದು ತಪ್ಪಿಸಿಕೊಂಡು ಓಡಿ ಹೋಗುತ್ತಿತ್ತು. ಇದೇ ಅದು ಕಂಡುಕೊಂಡ ಉಪಾಯ.

ಈ ರೀತಿ ಸಾರಂಗವು ಒಂದು ಕಡೆ ಕಾಣಿಸುತ್ತಿದ್ದ ತನ್ನ ಒಂದು ಕಣ್ಣನ್ನೂ, ಇನ್ನೊಂದು ಕಡೆ ಸಮುದ್ರದ ರಕ್ಷಣೆಯನ್ನೂ ನಂಬಿಕೊಂಡು ಪ್ರಾಣಾಪಾಯಗಳಿಂದ ಪಾರಾಗುತ್ತ ಸುಖವಾಗಿ ಕಾಲ ಕಳೆಯುತ್ತಿತ್ತು. ಹೀಗಿರುವಲ್ಲಿ ಒಂದು ದಿನ ಸಾರಂಗ ಮೇಯುತ್ತಿದ್ದಾಗ, ಸಮುದ್ರದ ಕಡೆಯಿಂದ ಒಂದುದೋಣಿ ಬಂತು. ಅದರಲ್ಲಿ ಕೆಲವು ಬೇಟೆಗಾರರು ಕುಳಿತಿದ್ದರು. ದೂರದ ಎತ್ತರದ ತೀರದ ಮೇಲೆ ಮೇಯುತ್ತಿದ್ದ ಸಾರಂಗ ಬೇಟೆಗಾರರ ಕಣ್ಣಿಗೆ ಬಿತ್ತು. ಕೂಡಲೇ ಅವರು ತೀರದ ಸಮೀಪಕ್ಕೆ ದೋಣಿಯನ್ನು ನಡೆಸಿಕೊಂಡು ಬಂದರು. ಅವರಲ್ಲೊಬ್ಬ ಬೇಟೆಗಾರ ತನ್ನ ಬಿಲ್ಲಿಗೆ ಬಾಣವನ್ನು ಹೂಡಿ, ಗುರಿಹಿಡಿದು ಬಿಟ್ಟು, ಸಾರಂಗವನ್ನು ಕೊಂದು ಹಾಕಿದನು.

**ಪ್ರಶ್ನೆಗಳು**

೧)ಕಾಡಿನ ಸ್ವಲ್ಪ ದೂರದಲ್ಲಿ ಏನಿತ್ತು?

ಎ)ಬಾವಿ ಬಿ)ನದಿ ತೀರ ಸಿ)ಸಮುದ್ರ ತೀರ ಡಿ)ಒಂಟಿ ಮನೆ

೨) ಸಮುದ್ರ ತೀರದಲ್ಲಿ ಸಾರಂಗಕ್ಕೆ ತಿನ್ನಲು ಏನು ಸಿಗುತ್ತಿತ್ತು?
ಎ)ಕಾಳು ಬಿ)ಮಾಂಸ ಸಿ)ಹುಲ್ಲು ಡಿ)ಗೆಡ್ಡೆ–ಗೆಣಸು

೩) ಸಾರಂಗಕ್ಕೆ ಯಾವ ದಿಕ್ಕು ಸುರಕ್ಷಿತವಾಗಿತ್ತು?
ಎ)ಪೂರ್ವ ಬಿ)ಸಮುದ್ರದ ಕಡೆಗೆ ಸಿ)ಉತ್ತರ ಡಿ)ದಕ್ಷಿಣ

೪) ಬೇಟೆಗಾರರು ಯಾವುದರಲ್ಲಿ ಕುಳಿತಿದ್ದರು?
ಎ)ಹಡಗಿನಲ್ಲಿ ಬಿ)ರಥದಲ್ಲಿ ಸಿ)ಕಾರಿನಲ್ಲಿ ಡಿ)ಕುದುರೆಯ ಮೇಲೆ

೫) ಸಾರಂಗಕ್ಕೆ ಒಂದು ಕಣ್ಣು ಇಲ್ಲದಿರುವುದರಿಂದ ಏನಾಯಿತು?
ಎ)ಸುಲಭವಾಯಿತು ಬಿ)ಸತ್ತು ಹೋಯಿತು ಸಿ)ಸುಖವಾಯಿತು ಡಿ)ಜ್ಞಾನ ಹೆಚ್ಚಿತು

**ಪ್ರಶ್ನೆ ೨. ಪದ್ಯಭಾಗವನ್ನು ಗಮನವಿಟ್ಟು ಓದಿಕೊಂಡು, ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **೫**

ತಲ್ಲಣಿಸದಿರು ಕಂಡ್ಯ ತಾಳು ಮನವೇ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ.

ಬೆಟ್ಟದಾ ತುದಿಯಲ್ಲಿ ಹುಟ್ಟಿದ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ
ಹುಟ್ಟಿಸಿದ ಸ್ವಾಮಿತಾ ಹೊಣೆಗಾರನಾಗಿರಲು
ಗಟ್ಯಾಗಿ ಸಲಹುವನು ಇದಕೆ ಸಂಶಯವಿಲ್ಲ.

ಅಡವಿಯೊಳಗಾಡುವ ಮೃಗಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರವಿತ್ತವರು ಯಾರೊ
ಪಡೆದ ಜನನಿಯ ತೆರದಿ ಸ್ವಾಮಿ ಹೊಣೆಗೇಡಾಗಿ
ಬಿಡದೆ ರಕ್ಷಿಪನು ಇದಕೆ ಸಂಶಯವಿಲ್ಲ.

ನವಿಲಿಗೆ ಚಿತ್ರ ಬರೆದವರು ಯಾರು
ಪವಳದ ಲತೆಗೆ ಕೆಂಪಿಟ್ಟವರು ಯಾರು
ಸವಿಮಾತಿನರಗಿಳಿಗೆ ಹಸುರು ಬರೆದವರು ಯಾರು
ಅವನೇ ಸಲಹುವನು ಇದಕೆ ಸಂಶಯವಿಲ್ಲ.

ಕಲ್ಲಿನಲಿ ಹುಟ್ಟಿ ಕೂಗುವ ಕಪ್ಪೆಗಳಿಗೆಲ್ಲ
ಅಲ್ಲಲ್ಲಿಗಾಹಾರ ತಂದೀವರಾರು
ಬಲ್ಲಿದನು ಕಾಗಿನೆಲೆಯಾದಿಕೇಶವರಾಯ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ.

**ಪ್ರಶ್ನೆಗಳು :-**

೧) ಹಸಿರು ಬಣ್ಣವನ್ನು ಯಾವುದಕ್ಕೆ ಬರೆಯಲಾಗಿದೆ?

ಎ)ನವಿಲಿಗೆ ಬಿ)ಗಿಳಿಗೆ ಸಿ)ತೆಂಗಿನಕಾಯಿಗೆ ಡಿ)ನೆಲ್ಲಿಕಾಯಿಗೆ

೨) ಮೃಗಪಕ್ಷಿಗಳು ಎಲ್ಲಿ ಆಡುತ್ತಿರುತ್ತವೆ?

ಎ)ಅಡವಿಯಲ್ಲಿ ಬಿ)ಸಂತೆಯಲ್ಲಿ ಸಿ)ಮನೆಯಲ್ಲಿ ಡಿ)ಜಾತ್ರೆಯಲ್ಲಿ

೩) ಕಲ್ಲಿನಲ್ಲಿ ಹುಟ್ಟಿ ಕೂಗುತ್ತಿರುವವು ಯಾವುವು?

ಎ)ಚೇಳು ಬಿ)ಹಾವು ಸಿ)ಕಪ್ಪೆ ಡಿ)ಜಿರಳೆ

೪) ಯಾವುದಕ್ಕೆ ಕಟ್ಟೆಯನುಕಟ್ಟಿ ನೀರೆರೆಯುತ್ತಾರೆ?

ಎ)ಕಪ್ಪೆಗೆ ಬಿ)ನಾಯಿಗೆ ಸಿ)ಕೋತಿಗೆ ಡಿ)ಮರಕ್ಕೆ

೫) ಕನಕದಾಸರ ಕೀರ್ತನೆಗಳ ಅಂಕಿತ ಯಾವುದು?

ಎ)ಕನಕಾಧೀಶ ಬಿ)ಕಾಗಿನೆಲೆಯಾದಿಕೇಶವ

ಸಿ)ಪುರಂದರ ವಿಠಲ ಡಿ)ವಿಜಯ ವಿಠಲ

**(ಅನ್ವಯಿಕ ವ್ಯಾಕರಣ =೧೬ ಅಂಕಗಳು)**

**ಪ್ರಶ್ನೆ ೩. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ. ಅದರಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.** **೪**

೧)'ಪಿತ್ರರ್ಥ' ಇದು ಯಾವ ಸಂಧಿಗೆ ಉದಾಹರಣೆಯಾಗಿದೆ?

ಎ)ಗುಣಸಂಧಿ ಬಿ)ವೃದ್ಧಿಸಂಧಿ ಸಿ)ಯಣ್ ಸಂಧಿ ಡಿ)ಆದೇಶ ಸಂಧಿ

೨)'ರಾಜೀವಸಖ' ಇದು ಯಾವ ಸಮಾಸಕ್ಕೆ ಉದಾಹರಣೆಯಾಗಿದೆ?

ಎ)ಗಮಕ ಸಮಾಸ ಬಿ)ಬುವ್ರೀಹಿ ಸಮಾಸ ಸಿ)ಅಂಶೀ ಸಮಾಸ ಡಿ)ದ್ವಂದ್ವ ಸಮಾಸ

೩)'ದೃಷ್ಟಿ' ಇದರ ತದ್ಭವ ರೂಪ ಯಾವುದು?

ಎ)ನೋಟ ಬಿ)ಮಾಟ ಸಿ)ದಿಟ್ಟಿ ಡಿ)ದೃಷ್ಟ

೪)'ಪ್ರೀತಿ' ಇದಕ್ಕೆ ವಿರುದ್ಧಾರ್ಥಕ ಪದ ಬರೆಯಿರಿ.

ಎ)ಪ್ರೇಮ ಬಿ)ಮೋಹ ಸಿ)ಅಪ್ರೀತಿ ಡಿ)ದ್ವೇಷ

**ಪ್ರಶ್ನೆ ೪. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ. ಅದರಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.** **೪**

೧)'ಪಥ' ಇದರ ಸಮಾನಾರ್ಥಕ ಪದ ಯಾವುದು?

ಎ)ಧರ್ಮ ಬಿ)ತೇರು ಸಿ)ದಾರಿ ಡಿ)ಮತ

೨)'ಕಟ್ಟಕಡೆಗೆ' ಇದು ಯಾವ ಪದಕ್ಕೆ ಉದಾಹರಣೆಯಾಗಿದೆ?

ಎ)ದ್ವಿರುಕ್ತಿ ಬಿ)ಜೋಡುನುಡಿ ಸಿ)ಅನುಕರಣಾವ್ಯಯ ಡಿ)ನುಡಿಗಟ್ಟು

೩)'ಶಿಕ್ಷಕ' ಇದು ಯಾವ ನಾಮಪದಕ್ಕೆ ಉದಾಹರಣೆಯಾಗಿದೆ?

ಎ)ಅಂಕಿತನಾಮ ಬಿ)ರೂಢನಾಮ ಸಿ)ಅನ್ವರ್ಥಕನಾಮ ಡಿ)ಸರ್ವನಾಮ

೪)'ಮಕ್ಕಳು ಹಣ್ಣುಗಳನ್ನು ತಿಂದರು.' ಈ ವಾಕ್ಯದಲ್ಲಿರುವ ಕರ್ಮ ಪದವನ್ನು ಗುರುತಿಸಿ.

ಎ)ಹಣ್ಣುಗಳನ್ನು ಬಿ)ಮಕ್ಕಳು ಸಿ)ತಿಂದರು ಡಿ)ಕರ್ಮಪದ ಇಲ್ಲ

**ಪ್ರಶ್ನೆ ೫. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ. ಅದರಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.** **೪**

೧)'ಅವನು ತುಂಬಾ ಜಾಣ ಹುಡುಗ.' ಈ ವಾಕ್ಯದಲ್ಲಿರುವ ಸರ್ವನಾಮವನ್ನು ಗುರುತಿಸಿ.

ಎ)ತುಂಬಾ ಬಿ)ಹುಡುಗ ಸಿ)ಜಾಣ ಡಿ)ಅವನು

೨)'ಹೋಗುವನು' ಇದನ್ನು ವರ್ತಮಾನ ಕಾಲಕ್ಕೆ ಪರಿವರ್ತಿಸಿ.

ಎ)ಹೋಗುತ್ತಿದ್ದಾನೆ ಬಿ)ಹೋದನು ಸಿ)ಹೋಗನು ಡಿ)ಹೋದಾನು

೩)'ರಾಹಿಲ್‌ನು ಚಿಕಿತ್ಸೆ ನೀಡಿದನು.' ಇದನ್ನು ಕರ್ಮಣಿ ವಾಕ್ಯವನ್ನಾಗಿ ಬದಲಾಯಿಸಿ.

ಎ)ರಾಹಿಲ್ ಚಿಕಿತ್ಸೆ ನೀಡಿಸಿದನು. ಬಿ)ಚಿಕಿತ್ಸೆ ರಾಹಿಲ್‌ನು ನೀಡಿದನು.

ಸಿ)ಚಿಕಿತ್ಸೆಯು ರಾಹಿಲ್‌ನಿಂದ ನೀಡಲ್ಪಟ್ಟಿತು. ಡಿ)ನೀಡಿದನು ರಾಹಿಲ್ ಚಿಕಿತೆ.

೪)'ಹಾಸಿಗೆ ಇದ್ದಷ್ಟು------. ಈ ಗಾದೆಯನ್ನು ಪೂರ್ಣಗೊಳಿಸಿ.

ಎ)ಮಲಗಿಕೊ ಬಿ)ಕೈ ಚಾಚು ಸಿ)ಕುಳಿತುಕೊ ಡಿ)ಕಾಲು ಚಾಚು

**ಪ್ರಶ್ನೆ ೬. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ. ಅದರಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.** **೪**

೧)'ಸತ್ತೀತು' ಈ ಪದ ಯಾವುದಕ್ಕೆ ಉದಾಹರಣೆಯಾಗಿದೆ?

ಎ)ನಿಷೇಧಾರ್ಥಕ ಬಿ)ಸಂಭವನಾರ್ಥಕ ಸಿ)ವಿದ್ಯರ್ಥಕ ಡಿ)ಪ್ರಶ್ನಾರ್ಥಕ

೨)'ವಿದ್ಯಾರ್ಥಿಗಳು ಅಭ್ಯಾಸ ಮಾಡರು' ಈ ವಾಕ್ಯ ಯಾವುದಕ್ಕೆ ಉದಾಹರಣೆಯಾಗಿದೆ?

ಎ)ನಿಷೇಧಾರ್ಥಕ ಬಿ)ಸಂಭವನಾರ್ಥಕ ಸಿ)ವಿದ್ಯರ್ಥಕ ಡಿ)ಪ್ರಶ್ನಾರ್ಥಕ

೩)'ಸಭೆಯೊಳ್' ಇದರಲ್ಲಿ ಯಾವ ವಿಭಕ್ತಿ ಪ್ರತ್ಯಯವಿದೆ?

ಎ)ಷಷ್ಠಿ ಬಿ)ಪಂಚಮಿ ಸಿ)ಸಪ್ತಮಿ ಡಿ)ಚತುರ್ಥಿ

೪)'ಜಗದಂಬೆ' ಇದು ಯಾವ ಸಂಧಿಗೆ ಉದಾಹರಣೆಯಾಗಿದೆ?

ಎ)ಆದೇಶ ಸಂಧಿ ಬಿ)ಜಶ್ತ್ವ ಸಂಧಿ ಸಿ)ಶ್ಚುತ್ವ ಸಂಧಿ ಡಿ)ವೃದ್ಧಿ ಸಂಧಿ

**(ಬಹು ಆಯ್ಕೆ ಪೆಶ್ನೆ- ಪಠ್ಯಗಳ ಅಧ್ಯಯನ =೧೪ ಅಂಕಗಳು)**

**ಪ್ರಶ್ನೆ ೭. ಪಠ್ಯದಲ್ಲಿನ ಪರಿಚಿತ ಪದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಪದವನ್ನು ಆರಿಸಿ ಬರೆಯಿರಿ.** **೪**

ಸುತ್ತಲು ಕವಿಯುವ ಕತ್ತಲೆಯೊಳಗೆ
ಪ್ರೀತಿಯ ಹಣತೆಯ ಹಚ್ಚೋಣ.
ಬಿರುಗಾಳಿಗೆ ಹೊಯ್ದಾಡುವ ಹಡಗನು
ಎಚ್ಚರದಲಿ ಮುನ್ನಡೆಸೋಣ.

ಕಲುಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ.
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ.

ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ
ಹೊಸ ಭರವಸೆಗಳ ಕಟ್ಟೋಣ.
ಮನುಜರ ನಡುವಣ ಅಡ್ಡಗೋಡೆಗಳ
ಕೆಡವುತ ಸೇತುವೆಯಾಗೋಣ.

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ–ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ.

**ಪ್ರಶ್ನೆಗಳು:–**

೧)ನದೀಜಲಗಳು ಏನಾಗಿವೆ?

ಎ)ಶುದ್ಧವಾಗಿವೆ ಬಿ)ಕಲುಷಿತವಾಗಿವೆ ಸಿ)ರಚಿಯಾಗಿವೆ ಡಿ)ಬಣ್ಣವಾಗಿವೆ

೨)ಕಾಡುಮೇಡುಗಳ ಸ್ಥಿತಿ ಹೇಗಿದೆ?

ಎ)ಬರಡು ಬಿ)ಸಮೃದ್ಧ ಸಿ)ಮಲೀನ ಡಿ)ಶುದ್ಧ

೩)ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು?

ಎ)ವಾಹನವನ್ನು ಬಿ)ಜೀವನವನ್ನು ಸಿ)ಹಡಗನ್ನು ಡಿ)ಬಾಳನ್ನು

೪)ಅಡ್ಡಗೋಡೆಗಳ ಕೆಡವಿ ಏನನ್ನು ನಿರ್ಮಿಸಬೇಕು?

ಎ)ಮನೆ ಬಿ)ಸೇತುವೆ ಸಿ)ಬಸ್ ನಿಲ್ದಾಣ ಡಿ)ಶಾಲೆ

**ಪ್ರಶ್ನೆ ೮. ಪಠ್ಯದಲ್ಲಿನ ಪರಿಚಿತ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಪದವನ್ನು ಆರಿಸಿ ಬರೆಯಿರಿ. ೫**

"ಡಾಕ್ಟರ್! ರೇಡಿಯೋ ಸಮನಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಗ್ರೌಂಡಿನೊಡನೆ ಸಂಪರ್ಕ ಬೆಳೆಸಲು ಸಾಧ್ಯವಾಗುತ್ತಿಲ್ಲ. ಎಲ್ಲಾದರೂ ಹೇಗಾದರೂ ಇಳಿಯೋಣವೆಂದರೆ ಈ ಕತ್ತಲೆಯಲ್ಲಿ ಏನೂ ಕಾಣಿಸ್ತಾ ಇಲ್ಲವಲ್ಲ?" ವಿಮಾನದ ಪೈಲಟ್ ನುಡಿದನು.

"ಇದು ನಮ್ಮ ಪ್ರದೇಶವೇ, ವೈರಿಗಳ ಪ್ರದೇಶವೇ ಎಂದು ಕೂಡಾ ಗೊತ್ತಾಗ್ತಾ ಇಲ್ಲ. ಹೇಗಾದರೂ ನೆಲ ಮುಟ್ಟಿದರೆ ಸಾಕಾಗಿತ್ತು." ಎನ್ನುತ್ತಾ ರಾಹಿಲ್ ತನ್ನ ಕೈಯಲ್ಲಿದ್ದ ಔಷಧ ಮತ್ತು ತುರ್ತು ಪರಿಸ್ಥಿತಿಗೆ ಬೇಕಾದ ಶಸ್ತ್ರ ಚಿಕಿತ್ಸಾ ಸಾಮಾನುಗಳ ಪೆಟ್ಟಿಗೆಯನ್ನು ಇನ್ನಷ್ಟು ಭದ್ರವಾಗಿ ಹಿಡಿದುಕೊಂಡನು. ಅಷ್ಟರಲ್ಲಿ ವಿಮಾನ ಭಯಂಕರ ಶಬ್ದದೊಡನೆ ಸ್ಫೋಟಿಸಿ ನೂರಾರು ಹೋಳುಗಳಾಗಿ ಚದುರಿಬಿತ್ತು.

ನೀರಿನಾಳದಲ್ಲಿ ಎಚ್ಚರಗೊಂಡ ಡಾಕ್ಟರ್ ರಾಹಿಲ್ ಕಷ್ಟಪಟ್ಟು ಮೇಲೆ ಬಂದನು. ಒಂದು ಕಾಲನ್ನು ಅಲುಗಿಸಲಾಗದಿದ್ದರೂ ಹೇಗೋ ಈಜತೊಡಗಿದನು. ತಾನು ತೀರದ ಕಡೆಗೆ ಹೋಗುತ್ತಿದ್ದೇನೆಯೇ ಅಥವಾ ಸಾಗರದ ಕಡೆಗೆ ಹೋಗುತ್ತಿದ್ದೇನೆಯೇ ಗೊತ್ತಾಗುತ್ತಿರಲಿಲ್ಲ. ಸೈನಿಕ ಉಡುಪಿನಲ್ಲಿ ಈಜಲು ಬಹಳ ತೊಂದರೆಯಾಗುತ್ತಿತ್ತು. ಬಹಳ ಹೊತ್ತು ಈಜಿ ಕೈ ಸೋತು ಇನ್ನೇನು ಮುಳುಗುದೇ ಎಂದು ಹತಾಶೆಯಿಂದ ಕೊನೆಯ ಬಾರಿ ತಲೆ ಎತ್ತಿದಾಗ ಕಣ್ಣು ಕೋರೈಸುವ ಮಿಂಚೊಂದು ಮಿಂಚಿ ಸಮೀಪದಲ್ಲೇ ತೀರವಿರುವುದನ್ನು ಪರಿಚಯಿಸಿತು. ಕಿವಿಗಚಿಕ್ಕುವ ಗುಡುಗೊಂದು ಹಿಂಬಾಲಿಸಿತು.

**ಪ್ರಶ್ನೆಗಳು:–**

೧)ರಾಹಿಲ್‌ನ ವೃತ್ತಿ ಯಾವುದು?

ಎ)ಶಿಕ್ಷಕ ಬಿ)ವೈದ್ಯ ಸಿ)ವಕೀಲ ಡಿ)ರೈತ

೨)ರಾಹಿಲ್‌ನಿಗೆ ಈಜಲು ಯಾವುದು ತೊಂದರೆ ಮಾಡುತ್ತಿತ್ತು?

ಎ)ಮೀನು ಬಿ)ಮೊಸಳೆ ಸಿ)ಉಡುಪು ಡಿ)ಹಾವು

೩)"ಈ ಕತ್ತಲೆಯಲ್ಲಿ ಏನೂ ಕಾಣಿಸ್ತಾ ಇಲ್ಲವಲ್ಲ?" ಎಂದು ಹೇಳಿದವರು ಯಾರು?

ಎ)ಸಾರಾ ಬಿ)ರಾಹಿಲ್ ಸಿ)ಪೈಲಟ್ ಡಿ)ಮುದುಕಿ

೪)ರಾಹಿಲ್ ಯಾವುದನ್ನು ಭದ್ರವಾಗಿ ಹಿಡಿದುಕೊಂಡನು?

ಎ)ಕಾಲನ್ನು ಬಿ)ಚಿಕಿತ್ಸಾ ಪೆಟ್ಟಿಗೆ ಸಿ)ಹಣವನ್ನು ಡಿ)ಮೊಬೈಲ್‌ನ್ನು

೫)ವಿಮಾನ ಎಷ್ಟು ಹೋಳುಗಳಾಗಿ ನೀರಿನಲ್ಲಿ ಬಿತ್ತು?

ಎ)ನೂರಾರು ಬಿ)ಐದಾರು ಸಿ)ಸಾವಿರಾರು ಡಿ)ಹತ್ತಾರು

**ಪ್ರಶ್ನೆ ೯. ಪಠ್ಯದಲ್ಲಿನ ಪರಿಚಿತ ಪಟ್ಯಪೂರಕ ಅಧ್ಯಯನವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಪದವನ್ನು ಆರಿಸಿ ಬರೆಯಿರಿ. ೫**

ಒಡೆಯನ ಅಂಗಳದಲಿ
ಮೈ ತುಂಬಿ ನಿಂತ ಮಾವಿನ ಮರಗಳು
ರೆಕ್ಕೆ ಬಿಚ್ಚಿ ಹಾರುವ ಹಕ್ಕಿಗಳು
ಮನದುಂಬಿ ಹಾಡುವ ಕೋಗಿಲೆಗಳು
ಕಡಲುಕ್ಕಿ ಹರಿಯುವ ಸಂಭ್ರಮ ಇಳೆಗೆ
ಇದಕೇನಾಗಿದೆ ಈ ಪುಟ್ಟ ಪೋರಿಗೆ
ಒಳ-ಹೊರಗಿನ ಸಂಭ್ರಮದಲ್ಲಿ
ಬಟ್ಟೆ ಮೇಲೆ ಬಣ್ಣದ ಚಿಟ್ಟೆ
ಚಿತ್ತಾರ ಬಿಡಿಸಿದ ನವಿಲು
ಹೊರಗೆ ಇವಳು
ಹಾಲುಗಲ್ಲದ ಹಸುಳೆ
ಮುಸುರೆ ತಿಕ್ಕುತ್ತಿದ್ದಾಳೆ
ಬಾಗಿಲಲಿ ಬಳುಕುವ
ಮಾವಿನೆಲೆಯ ತೋರಣ
ಮಲ್ಲಿಗೆ ಹೂವಲಿ
ಬೀರುವ ಮುಗುಳು ನಗೆ
ಹೊಳೆವ ರಂಗೋಲಿಯಲಿ
ಥಳಥಳಿಸುವ ಬಾಲ ರವಿಯ
ಕಂಡು ಮೂಕವಿಸ್ಮಿತಳಾದ ಪುಟ್ಟಿ
ಮತ್ತೆ ಮತ್ತೆ ನೋಡುತ್ತಿದ್ದಾಳೆ.
ಗುಡಿಸಲಿನಲಿ ಗೂರುತ್ತ ಅಮ್ಮ ಮಲಗಿದ್ದಾಳೆ
ತೂತು ಬಿದ್ದ ಸೀರೆಯಲಿ ಬಾಲ ರವಿ ಸೊರಗಿದ್ದಾನೆ
ಸುಣ್ಣ ಕಾಣದ ಗೋಡೆಗಳು ಮುಖ ಮುಚ್ಚಿಕೊಂಡಿವೆ
ಕತ್ತಲೆ ಗವ್ವೆನ್ನುವ ಗುಡಿಸಲೊಳಗೆ
ಬರಲು ವಸಂತನಿಗೂ ಹೆದರಿಕೆ!

**ಪ್ರಶ್ನೆಗಳು:-**

೧)ಮನದುಂಬಿ ಹಾಡುತ್ತಿರುವವು ಯಾವುವು?

ಎ)ಮಕ್ಕಳು ಬಿ)ಕೋಗಿಲೆಗಳು ಸಿ)ನವಿಲುಗಳು ಡಿ)ಕಾಗೆಗಳು

೨)ಪುಟ್ಟ ಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ?

ಎ)ಬಂಗಲೆಯಲ್ಲಿ ಬಿ)ಹೋಟೇಲಿನಲ್ಲಿ ಸಿ)ದೇವಾಲಯದಲ್ಲಿ ಡಿ)ಗುಡಿಸಲಿನಲ್ಲಿ

೩)ಯಾವುದರಲ್ಲಿ ಮುಗುಳು ನಗೆ ಕಾಣುತ್ತಿತ್ತು?

ಎ)ಮಗುವಿನ ಮುಖದಲ್ಲಿ ಬಿ)ತಾಯಿಯ ಮುಖದಲ್ಲಿ

ಸಿ)ಮಲ್ಲಿಯಲ್ಲಿ ಡಿ)ತೋರಣದಲ್ಲಿ

೪)ಪುಟ್ಟ ಪೋರಿಯು ಏನು ಮಾಡುತ್ತಿದ್ದಾಳೆ?

ಎ)ಆಟ ಆಡುತ್ತಿದ್ದಾಳೆ ಬಿ)ಓದುತ್ತಿದ್ದಾಳೆ ಸಿ)ಮುಸುರೆ ತಿಕ್ಕುತ್ತಿದ್ದಾಳೆ ಡಿ)ಬರೆಯುತ್ತಿದ್ದಾಳೆ

೫)ಗುಡಿಸಲೊಳಗೆ ಬರಲು ಯಾರಿಗೆ ಹೆದರಿಕೆಯಾಗಿತ್ತು?

ಎ)ನಾಯಿಗೆ ಬಿ)ವಸಂತನಿಗೆ ಸಿ)ಬೆಕ್ಕಿಗೆ ಡಿ)ಕಳ್ಳರಿಗೆ

## ಭಾಗ-ಬಿ (೪೦ ಅಂಕಗಳು)

## (ಬರವಣಿಗೆ ಕೌಶಲ್ಯ) =೧೨ ಅಂಕಗಳು

**ಪ್ರಶ್ನೆ ೧೦. ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಿಷಯದ ಕುರಿತು ೧೫೦ ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.** ೪

ಎ) ಸ್ವಾತಂತ್ರ್ಯ ಹೋರಾಟ

ಬಿ) ನನ್ನ ನೆಚ್ಚಿನ ಆಟ

ಸಿ) ವಚನ ಸಾಹಿತ್ಯದ ಪ್ರಾಮುಖ್ಯತೆ

**ಪ್ರಶ್ನೆ ೧೧.** ನಿಮ್ಮ ಶಾಲೆಯಲ್ಲಿ ಆಚರಿಸಲಿರುವ ವಾರ್ಷಿಕೋತ್ಸವಕ್ಕೆ ಆಮಂತ್ರಿಸುವ ಕುರಿತು ನಿಮ್ಮ ಗೆಳೆಯ/ಗೆಳತಿಗೆ ಒಂದು ಪತ್ರ ಬರೆಯಿರಿ. ೪

**ಪ್ರಶ್ನೆ ೧೨.** ನಿಮ್ಮ ಶಾಲೆಯಲ್ಲಿ ಆಚರಿಸಿದ **'ಮಕ್ಕಳ ದಿನಾಚರಣೆ'**ಯ ಕುರಿತು ಪತ್ರಿಕಾ ವರದಿ ರಚಿಸಿರಿ.೪

## (ಪದ್ಯಗಳ ಅಧ್ಯಯನ =೨೮ ಅಂಕಗಳು)

**ಪ್ರಶ್ನೆ ೧೩. ಈ ಕೆಳಗಿನ ಪ್ರಶ್ನೆಗಳಿಗೆ ೩/೪ ವಾಕ್ಯಗಳಲ್ಲಿ ಉತ್ತರಿಸಿ.** ೮

೧)ಲಕ್ಷ್ಮಣನು ಅಣ್ಣನನು ಹೇಗೆ ಸಂತೈಸಿದನು?

೨)ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು?

೩)ವಿವೇಕಾನಂದರು ಚಿಕ್ಯಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು?

೪)ಹಲಗಲಿಗೆ ದಂಡು ಬರಲು ಕಾರಣವೇನು?

**ಪ್ರಶ್ನೆ ೧೪. ಈ ಕೆಳಗಿನ ಪ್ರಶ್ನೆಗಳಿಗೆ ೫/೬ ವಾಕ್ಯಗಳಲ್ಲಿ ಉತ್ತರಿಸಿ.** ೬

೧)ಮುದುಕಿಯು ತನ್ನ ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದಳು?

೧)ಹಲಗಲಿ ದಂಗೆಗೆ ಕಾರಣವೇನು? ಸರಕಾರ ಅದನ್ನು ಹೇಗೆ ನಿಯಂತ್ರಿಸಿತು?

**ಪ್ರಶ್ನೆ ೧೫. ಈ ಕೆಳಗಿನ ವಾಕ್ಯಗಳನ್ನು ಸಂದರ್ಭ, ಸ್ವಾರಸ್ಯದೊಂದಿಗೆ ವಿವರಿಸಿ** ೬

೧)"ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ."

೨)"ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು."

**ಪ್ರಶ್ನೆ ೧೬. ಈ ಕೆಳಗಿನ ಪ್ರಶ್ನೆಗಳಿಗೆ ೮/೧೦ ವಾಕ್ಯಗಳಲ್ಲಿ ಉತ್ತರಿಸಿ.** **೪**

೧)ಯುದ್ಧದಿಂದಾಗುವ ಅನಾಹುತಗಳ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

**–:ಅಥವಾ:–**

ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

**ಪ್ರಶ್ನೆ ೧೭. ಈ ಕೆಳಗಿನ ಪ್ರಶ್ನೆಗಳಿಗೆ ೮/೧೦ ವಾಕ್ಯಗಳಲ್ಲಿ ಉತ್ತರಿಸಿ.** **೪**

೧) ಹಲಗಲಿಯ ದಂಗೆಯ ಪರಿಣಾಮವೇನು? ವಿವರಿಸಿ.

**–:ಅಥವಾ:–**

ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿಯ ಅಭಿಪ್ರಾಯವನ್ನು ವಿವರಿಸಿ.